# ಆಹಾ ಸುದ್ದಿ!

★ ಸಸಿತೋಟ



ಪಾಶ್ಚಿಮಾತ್ಯ ದೇಶಗಳಲ್ಲಿ ಇತ್ತೀಚೆಗೆ 'ಪ್ರತಿಭಟನೆ, ಪ್ರದರ್ಶನ.. ಎಲ್ಲವುಗಳಲ್ಲೂ ಬರಿಮೈ ಪ್ರದರ್ಶನ ಸಾಮಾನ್ಯ ಎನಿಸಿಬಿಟ್ಟಿದೆ. ಆಸ್ಟ್ರಿಯಾದ ವಿಯೆನ್ನಾದ ವಸ್ತು ಸಂಗ್ರಹಾಲಯದಲ್ಲಿ ನಡೆಯುತ್ತಿರುವ '1800ರಿಂದ ಇದುವರೆಗಿನ ನಗ್ನ ಪುರುಷರು' ಪ್ರದರ್ಶನಕ್ಕೆ 2013ರ ಪುರುಷರೂ ಬಟ್ಟೆ ಬಿಚ್ಚಿ ನಡೆದರು. ಬಟ್ಟೆ ತೊಟ್ಟು ಹೋದರೆ ಕಲಾಕೃತಿಗಳಲ್ಲಿರುವ ಪುರುಷರಿಗೆ ನಾಚಿಕೆಯಾಗಬಾರದಲ್ಲ ಎಂಬ ಉದ್ದೇಶವಿರಬಹುದು.

ಇದು ಹೋರಿಯ ವೃಷಣ. ಇದನ್ನು ಬೇಯಿಸಿದ ನೀರಲ್ಲಿ ತಲೆಗೂದಲು ತೊಳೆದರೆ ಅದರ ಅಂದವೇ ಅಂದವಂತೆ. ಅಮೆರಿಕಾದಲ್ಲಿ ಅಕಾಡೆಮಿ (ಆಸ್ಕರ್) ಪ್ರಶಸ್ತಿ ಸಮಾರಂಭದಲ್ಲಿ ಅತ್ಯಂತ ಸುಂದರವಾಗಿ ಕಾಣಿಸಿಕೊಳ್ಳುವುದಕ್ಕೆ ಹಾಲಿವುಡ್ ನಟ-ನಟಿಯರು ನಡೆಸುವ ತಯಾರಿಯಲ್ಲಿ ಇದೂ ಒಂದು. ಮುಖಕ್ಕೆ ಹಕ್ಕಿಗಳ ಹಿಕ್ಕೆಯ ಫೇಶಿಯಲ್ ಅಂತೆ. ಬೀಸಾಡುವ ವಸ್ತುಗಳೂ ಬೆಲೆ ಬಾಳುವ ಕಾಲವಿದು.



ಅಮೆರಿಕಾದ ತನಿಖಾ ಸಂಸ್ಥೆ ಎಫ್‌ಬಿಐನಲ್ಲಿ ಅಮಾನತಿಗೊಳಗಾಗುವವರ ಸಂಖ್ಯೆ ಜಾಸ್ತಿ ಆಗಿದೆಯಂತೆ. ಅವರೆಲ್ಲ ವೈರಿ ದೇಶಗಳಿಗೆ ರಹಸ್ಯ ಸೋರಿಕೆ ಮಾಡಿರಬಹುದೇ? ಛೇ ಅಷ್ಟೆಲ್ಲ ಅಪ್ರಾಮಾಣಿಕರಲ್ಲ ಅವರು. ಕಚೇರಿ ಕೊಟ್ಟ ಬ್ಲ್ಯಾಕ್‌ಬೆರಿಯಲ್ಲಿ ಸಹೋದ್ಯೋಗಿಗಳಿಗೆ ನಗ್ನ ಚಿತ್ರಗಳನ್ನು, ಅಶ್ಲೀಲ ಎಸ್‌ಎಂಎಸ್‌ಗಳನ್ನು ಕಳಿಸುವುದು, ಸ್ನೇಹಿತನ ಪತ್ನಿಯನ್ನು ಪಟಾಯಿಸಲು ಯತ್ನಿಸುವುದು, ಅಶ್ಲೀಲ ವಿಡಿಯೋ ನೋಡುವುದು.. ಇಂಥದ್ದೇ ಕೇಸುಗಳಂತೆ. ಸಂಸ್ಥೆ ಕೆಲಸವಿಲ್ಲದೇ ಕೂರಿಸಿದರೆ ಉದ್ಯೋಗಿಗಳು ಇನ್ನೇನು ಮಾಡಬೇಕು?

ಮೇಘಾಲಯದಲ್ಲೀಗ ಚುನಾವಣೆಯ ಅಬ್ಬರ. ನಾಮಪತ್ರ ಸಲ್ಲಿಸುವವರ ಎದೆಯಲ್ಲಿ ಅವಲಕ್ಕಿ ಕುಟ್ಟಿದರೆ, ಅವರ ಹೆಸರುಗಳನ್ನು ಓದಿ ಮತದಾರರು ಹೊಟ್ಟೆ ಹಿಡಿದು ನಗುತ್ತಿದ್ದಾರಂತೆ. ಜಿಮ್ಮಿ ಕಾರ್ಟರ್, ಕೆನಡಿ ಎಂದು ಅಮೆರಿಕದ ಮಾಜಿ ಅಧ್ಯಕ್ಷರ ಹೆಸರು ಹೊತ್ತವರು ಒಂದು ಕಡೆಯಾದರೆ, ಹಿಟ್ಲರ್ ಹೆಸರಿನ ಅಭ್ಯರ್ಥಿ ಇನ್ನೊಂದು ಕಡೆ. ಮತ್ತೊಂದೆಡೆ ರೋಮಿಯೊ ರಾಣಿ. ಚುನಾವಣೆ ಬಗ್ಗೆ ಚರ್ಚಿಸುವುದು ಬಿಟ್ಟು ಅಭ್ಯರ್ಥಿಗಳ ಹೆಸರಿನ ಕುರಿತು ಬಿಸಿಬಿಸಿ ಚರ್ಚೆ ನಡೆಯುತ್ತಿರುವುದು ಹೊಸ ದಾಖಲೆ ಇರಬಹುದು.



ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದ ಬ್ರಿಟನ್ ಪ್ರಧಾನಿ ಡೇವಿಡ್ ಕ್ಯಾಮೆರಾನ್ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆ ಚಪಾತಿ ಬೇಯಿಸಿ ತೋರಿಸಿದರು. ಚಪಾತಿ ಲಟ್ಟಿಸುವ ಷೋ ಕೊಟ್ಟಿದ್ದರೆ ಅದು ಭಾರತದ ನಕಾಶೆಯಾಗುತ್ತಿತ್ತೋ ಅಥವಾ ಬ್ರಿಟನ್ನಿನದ್ದೋ ಎಂದಾದರೂ ನೋಡಬಹುದಿತ್ತು!



ಇಟಲಿಯ ಐವ್ರೀಯಾದಲ್ಲೀಗ ಜಾತ್ರೆ ಸಂಭ್ರಮ. ಮಧ್ಯಯುಗದ ಯುದ್ಧವನ್ನು ನಕಲು ಮಾಡುವ ಹುಮ್ಮಸ್ಸು. ಬಡಿದಾಡಲು ಆ ಕಾಲದ ಆಯುಧಗಳಾದ ಖಡ್ಗ, ಬಿಲ್ಲು ಬಾಣಗಳಿಗೆ ತುಕ್ಕು ಹಿಡಿದಿದೆ ನೋಡಿ. ಈಗಿರುವ ಆಯುಧವೆಂದರೆ ದಂಡಿಯಾಗಿ ಸಿಗುವ ಕಿತ್ತಳೆ ಹಣ್ಣುಗಳು. ಅದರಲ್ಲೇ ಹೊಡೆದುಕೊಂಡು ಸುರಿಯುವ ಕಿತ್ತಳೆ ರಸವನ್ನು ನೆಕ್ಕಿಕೊಳ್ಳುವ ಮಜಾ.